# ಕರ್ನಾಟಕ ಲೋಕಾಯುಕ್ತ

**ನಂ.ಕಂಪ್ಲೆಂಟ್/ಉಪಲೋಕ್/ಬಿಡಿ–3329/2017/ಡಿಆರ್ಇ–1**

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 20/07/2022

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

ವಿಷಯ: (1) ಶ್ರೀ. ಶ್ರೀನಿವಾಸಮೂರ್ತಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು (2) ಶ್ರೀ. ಬಿ.ಆರ್. ಫಣೀಂದ್ರ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ವರ್ಲಕೊಂಡ ಗ್ರಾಮ ಪಂಚಾಯಿತಿ, ಗುಡಿಬಂಡೆ ತಾಲ್ಲೂಕು, ಚಿಕ್ಕಬಳ್ಳಾಪುರ ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1. ಶ್ರೀ. ರಾಮಕೃಷ್ಣಪ್ಪ, ತಂದೆ ಲೇಟ್ ಆಂಜಿನೇಯಲು, ಉದವರಪಲ್ಲಿ ಗ್ರಾಮ, ಪುಲಗಲ್ಲು ಅಂಚೆ, ಚೆಳೂರು ಹೋಬಳಿ, ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು (1) ಶ್ರೀ. ಶ್ರೀನಿವಾಸಮೂರ್ತಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು (2) ಶ್ರೀ. ಬಿ.ಆರ್. ಫಣೀಂದ್ರ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ವರ್ಲಕೊಂಡ ಗ್ರಾಮ ಪಂಚಾಯಿತಿ, ಗುಡಿಬಂಡೆ ತಾಲ್ಲೂಕು, ಚಿಕ್ಕಬಳ್ಳಾಪುರ (ಇನ್ನು ಮುಂದೆ ಎದುರುದಾರ ನಂ.1 ಮತ್ತು 2 ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರು ತಮ್ಮ ದೂರಿನಲ್ಲಿ ಚಿಕ್ಕಬಳ್ಳಾಪುರ ತಾಲ್ಲೂಕು, ಗುಡಿಬಂಡೆ ಗ್ರಾಮಪಂಚಾಯಿತಿಯಲ್ಲಿ ಎದುರುದಾರರು ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ 14ನೇ ಹಣಕಾಸು ಯೋಜನೆಗೆ ಸಂಬಂಧಿಸಿದಂತೆ ಎಷ್ಟು ಹಣ ಬಂದಿದೆ, ಬಂದಿರುವ ಹಣವನ್ನು ಯಾವ ಕಾಮಗಾರಿಗಳಿಗೆ ಖರ್ಚು ಮಾಡಲಾಗಿದೆ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಕ್ರಿಯಾ ಯೋಜನೆ, ಬ್ಯಾಂಕ್ ಪಾಸ್ ಶೀಟ್, ನಗದು ಪುಸ್ತಕ ಮತ್ತು ವೋಚರ್‌ಗಳನ್ನು ನೀಡುವಂತೆ ಕೋರಿರುತ್ತರೆ. ಆದರೆ ಪಿ.ಡಿ.ಓ ರವರು ಬ್ಯಾಂಕ್ ಪಾಸ್ ಶೀಟ್ ಮಾತ್ರ ಕೊಟ್ಟಿರುತ್ತಾರೆ. ಆದ್ದರಿಂದ, ಸದರಿಯವರು ನಗದು ವಹಿ ಮತ್ತು ವೋಚರ್‌ಗಳನ್ನು ನಿರ್ವಹಿಸಿರುವುದಿಲ್ಲವೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ. ದಾಖಲೆಗಳನ್ನು ನೀಡಿದರೆ ಅಕ್ರಮ ಬಯಲಿಗೆ ಬರುತ್ತದೆ ಎಂಬ ಕಾರಣದಿಂದ ದಾಖಲೆಗಳನ್ನು ನೀಡಿರುವುದಿಲ್ಲ. ಮೇಲ್ಮನವಿ ಸಲ್ಲಿಸಿದರೂ ಸಹ ಯಾವುದೇ ಪ್ರಯೋಜನವಾಗಿರುವುದಿಲ್ಲ. ಆದ್ದರಿಂದ, ವೋಚರ್‌ಗಳನ್ನು ಪರಿಶೀಲಿಸಿ, ನೈಜತೆಯನ್ನು ಪರಿಶೀಲಿಸಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿ ದೂರನ್ನು ಸಲ್ಲಿಸಿರುತ್ತಾರೆ.

3. ದೂರುದಾರರ ದೂರಿನ ಮೇಲೆ ಆಕ್ಷೇಪಣೆ ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. 1ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ದೂರುದಾರರು ಮಾಹಿತಿ ಹಕ್ಕು ಅಧಿನಿಯಮದಡಿ ದಿ.1/4/2016 ರಿಂದ 3/3/17 ರ ಅವಧಿಗೆ ಸಂಬಂಧಿಸಿದಂತೆ 14ನೇ ಹಣಕಾಸು ಯೋಜನೆಯ ದಾಖಲೆಗಳ ವಿವರಗಳನ್ನು ಪಡೆಯಲು ಮಲ್ಲಕೊಂಡ ಗ್ರಾಮಪಂಚಾಯಿತಿಗೆ ಅರ್ಜಿಯನ್ನು ಸಲ್ಲಿಸಿದ್ದು, ಅವರು ಅರ್ಜಿ ಸಲ್ಲಿಸಿರುವ ದಿನಾಂಕದಲ್ಲಿ ಸದರಿಯವರು ಹಂಪಸಂದ್ರ ಗ್ರಾಮಪಂಚಾಯಿತಿಯಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದರಿಂದ ಮತ್ತು ಲೆಕ್ಕ ಪರಿಶೋಧನೆಗೆ ದಾಖಲೆ ಪತ್ರಗಳನ್ನು ಒದಗಿಸುವ ಸಲುವಾಗಿ ಅವರ ಬಳಿ ಇಟ್ಟುಕೊಂಡಿದ್ದು, ಲೆಕ್ಕ ಪರಿಶೋಧನೆಯನ್ನು ಮಾಡಿಸಿರುತ್ತಾರೆ. ಸದರಿ ಗ್ರಾಮಪಂಚಾಯಿತಿಯಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿರುವ ಪಿ.ಡಿ.ಓ.ರವರು ದಾಖಲೆಗಳನ್ನು ನೀಡಲು ತಿಳಿಸಿದ್ದರೆ ಅದನ್ನು ಒದಗಿಸುತ್ತಿದ್ದರು. ಸಂಬಂಧಪಟ್ಟ ಎಲ್ಲಾ ದಾಖಲೆ ಪತ್ರಗಳ ನಕಲು ಪ್ರತಿಗಳನ್ನು ಸಲ್ಲಿಸುತ್ತಿರುವುದಾಗಿ ಹಾಗೂ ಯಾವುದೇ ವಿಧವಾಗಿ ದಾಖಲೆ ಪತ್ರಗಳನ್ನು ಮರೆಮಾಚಿ ಅಕ್ರಮವೆಸಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

4. 1ನೇ ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ಅವರು 14ನೇ ಹಣಕಾಸು ಯೋಜನೆಗೆ ಬಂದಿರುವ ಅನುದಾನಕ್ಕೆ ಸಂಬಂಧಪಟ್ಟಂತೆ ಕ್ರಿಯಾ ಯೋಜನೆ, ಬ್ಯಾಂಕ್ ಪಾಸ್‌ಶೀಟ್, ನಗದು ವಹಿ, ಹಾಗೂ ಖರ್ಚಿನ ಬಗ್ಗೆ ವೋಚರ್‌ಗಳನ್ನು ಪಡೆಯಲು ಮಾಹಿತಿ ಕೋರಿರುತ್ತಾರೆ. ಆದರೆ ಎದುರುದಾರರು ಬ್ಯಾಂಕ್ ಪಾಸ್‌ಶೀಟ್ ಮಾತ್ರ ನೀಡಿದ್ದು, ನಂತರದಲ್ಲಿ ಕೆಲವು ವೋಚರ್‌ಗಳನ್ನು ಮಾತ್ರ ನೀಡಿರುತ್ತಾರೆ. ಅದನ್ನು ಪರಿಶೀಲಿಸಿದಾಗ, ಬಿಡುಗಡೆಯಾದ ಅನುದಾನ ಪೂರ್ತಿ ಖರ್ಚಾಗಿದ್ದು, ಅದರನ್ವಯ ವೋಚರ್‌ಗಳು ಲಭ್ಯವಿರುವುದಿಲ್ಲ. ರೂ.10,60,000/- ಕ್ಕೆ ಯಾವುದೇ ವೋಚರ್ ಲಭ್ಯವಿರುವುದಿಲ್ಲ. ಪ್ರತಿಯೊಂದು ಕಾಮಗಾರಿ ಹಾಗೂ ಸಂಬಂಧಪಟ್ಟ ಕೆಲಸಗಳಿಗೆ ಕ್ರಿಯಾ ಯೋಜನೆ ಹಾಗೂ ಅಂದಾಜು ಪಟ್ಟಿ ನಿಯಮಾನುಸಾರ ಪಾಲನೆ ಮಾಡಿರುವುದಿಲ್ಲ ಮತ್ತು ಗ್ರಾಮಪಂಚಾಯಿತಿಯ ಠರಾವು ಮಾಡಿರುವುದಿಲ್ಲ. ಸಲ್ಲಿಸಿರುವ ದಾಖಲಾತಿಗಳಲ್ಲಿರುವ ಹಲವಾರು ಲೋಪದೋಷಗಳನ್ನು ನಮೂದಿಸಿರುತ್ತಾರೆ. ಎದುರುದಾರರು ನಿರ್ವಹಿಸಿರುವ ವೋಚರ್‌ಗಳು ನಕಲಿ ವೋಚರ್‌ಗಳಾಗಿದ್ದು, ಮಳಿಗೆಯ ಮಾಲೀಕರು ಹಾಗೂ ಪಿ.ಡಿ.ಓ. ಶಾಮೀಲಾಗಿ ದುಪ್ಪಟ್ಟು ಬೆಲೆ ನಮೂದಿಸಿ ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆಂದು ಹೇಳಿರುತ್ತಾರೆ.

5. ದೂರುದಾರರು ತನ್ನ ಪ್ರತ್ಯುತ್ತರದಲ್ಲಿ ವೋಚರ್‌ಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡಿರುವುದಿಲ್ಲ ಮತ್ತು ಕೆಲವು ನಕಲಿ ವೋಚರ್‌ಗಳನ್ನು ಸೃಷ್ಟಿಸಿರುತ್ತಾರೆನ್ನುವ ಆಪಾದನೆ ಇದ್ದು, ಆದ್ದರಿಂದ, ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಆದ ಖರ್ಚು ವೆಚ್ಚಗಳ ಬಗ್ಗೆ ಪರಿಶೀಲನೆ ನಡೆಸುವುದು ಸೂಕ್ತವೆಂದು ಕಂಡುಬರುತ್ತದೆ. ಆದ್ದರಿಂದ, ದೂರುದಾರರ ದೂರಿಗೆ ಸಂಬಂಧಪಟ್ಟಂತೆ ವಿಚಾರಣೆ ನಡೆಸಿ ದಾಖಲಾತಿಗಳ ಸಮೇತ ವರದಿ ನೀಡುವಂತೆ ಲೆಕ್ಕ ಪರಿಶೋಧಕರು, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಂದ ವಿಚಾರಣೆ ನಡೆಸಿ ವರದಿ ಸಲ್ಲಿಸುವಂತೆ ಮುಖ್ಯ ಅಭಿಯಂತರರು, ತಾಂತ್ರಿಕ ವಿಭಾಗ ಇವರಿಗೆ ಆದೇಶಿಸಲಾಯಿತು.

No.Compt/Uplok/BD/3329/2017/DRE-3

6. ಶ್ರೀ.ಮಹದೇವ, ಲೆಕ್ಕ ಅಧೀಕ್ಷಕರು-1, ತಾಂತ್ರಿಕ ವಿಭಾಗ, ರವರು ದಿ.24/1/2018 ರಂದು ಕಡತವನ್ನು ಸ್ವೀಕರಿಸಿರುತ್ತಾರೆ. ತನಿಖಾಧಿಕಾರಿಯವರು ದಾಖಲಾತಿಗಳೊಂದಿಗೆ ತನಿಖಾ ವರದಿಯನ್ನು ಸಲ್ಲಿಸಿದ್ದು, ಈ ಕೆಳಕಂಡಂತೆ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ತನಿಖಾ ಅಭಿಪ್ರಾಯ

*"ಆಪಾದನೆ-1 ಎಂದು ಪರಿಗಣಿಸಲಾಗಿರುವುದರಲ್ಲಿ ದೂರುದಾರರು ದಿನಾಂಕ 12/01/2018 ರಂದು ಸಲ್ಲಿಸಿರುವ ಪ್ರತ್ಯುತ್ತರ ಪತ್ರದಲ್ಲಿರುವ ಅಂಶಗಳಲ್ಲಿ 2016-17ನೇ ಸಾಲಿನಲ್ಲಿ ವರ್ಲಕುಂಡ ಗ್ರಾಮಪಂಚಾಯತಿಗೆ 14ನೇ ಹಣಕಾಸು ಯೋಜನೆಗೆ ಬಿಡುಗಡೆಯಾದ ಅನುದಾನ ರೂ.24,35,320/- ಗಳು ಆಗಿದ್ದು, ಅನುದಾನ ಪೂರ್ತಿ ಖರ್ಚು ಆಗಿರುತ್ತದೆ. ಇದರ ಅನ್ವಯ ಪೂರ್ತಿ ಹಣಕ್ಕೆ ಸಂಬಂಧಪಟ್ಟಂತೆ ವೋಚರ್‌ಗಳು ಲಭ್ಯವಿರುವುದಿಲ್ಲ. ನೀಡಿರುವ ವೋಚರ್‌ಗಳ ಪ್ರಕಾರ ರೂ.13,68,885/- ಗಳಿಗೆ ವೋಚರ್ಸ್‌ಗಳಿದ್ದು, ಉಳಿಕೆ ಮೊತ್ತ ರೂ.10,66,435/- ಗಳಿಗೆ ವೋಚರ್ಸ್ ಲಭ್ಯವಿರುವುದಿಲ್ಲವೆಂದು ಆಪಾದಿಸಿರುತ್ತಾರೆ."*

*"ಎದುರುದಾರರು ದಿನಾಂಕ 26/5/2018 ರ ಪತ್ರದಲ್ಲಿ ಸಲ್ಲಿಸಿರುವ ಮಾಹಿತಿಗಳಲ್ಲಿ ಕ್ರಮ ಸಂಖ್ಯೆ.1 ರಲ್ಲಿ ವಿವರಣೆ ನೀಡಿರುವುದರಲ್ಲಿ ದೂರುದಾರರು ಕೋರಿರುವ ಮಾಹಿತಿಗೆ ಸಂಬಂಧಿಸಿದಂತೆ ದಿನಾಂಕ 1/4/2016 ರಿಂದ ದಿನಾಂಕ 15/12/2016 ರ ಅವಧಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಪರಿಶೀಲನೆಗಾಗಿ ಈ ಸಂಸ್ಥೆಗೆ ಸಲ್ಲಿಸಿರುವುದಾಗ ತಿಳಿಸಿದ್ದು, ಸದರಿ ಅವಧಿಗೆ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ. ದಿನಾಂಕ 16/12/2016 ರಿಂದ ದಿನಾಂಕ 31/3/2017 ರ ವರೆಗೆ ಕರ್ತವ್ಯ ನಿರ್ವಹಿಸಿದ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಿಂದ ಮಾಹಿತಿಯನ್ನು ಪಡೆಯಬೇಕೆಂದು ಉತ್ತರ ಸಲ್ಲಿಸಿರುತ್ತಾರೆ." (ಅಂದರೆ 2ನೇ ಎದುರುದಾರರಿಂದ)*

*"ಆಪಾದನೆ-2 ಎಂದು ಪರಿಗಣಿಸಲಾಗಿರುವುದರಲ್ಲಿ ದೂರುದಾರರು ದಿನಾಂಕ 12/01/2018 ರಂದು ಸಲ್ಲಿಸಿರುವ ಪ್ರತ್ಯುತ್ತರ ಪತ್ರದಲ್ಲಿರುವ ಅಂಶಗಳಲ್ಲಿ ಪ್ರತಿಯೊಂದು ಕಾಮಗಾರಿ ಮತ್ತು ಸಂಬಂಧಪಟ್ಟ ಕೆಲಸಗಳಿಗೆ ಕ್ರಿಯಾಯೋಜನೆ ಹಾಗೂ ಅಂದಾಜು ದರಪಟ್ಟಿ ನಿಯಮಾನುಸಾರ ಪಾಲನೆ ಮಾಡಿರುವುದಿಲ್ಲ ಹಾಗೂ ಗ್ರಾಮ ಪಂಚಾಯತಿಯ ಠರಾವು ಮಾಡಿರುವುದಿಲ್ಲ ಎಂದು ಆಪಾದಿಸಿರುತ್ತಾರೆ."*

*"ಎದುರುದಾರರು ದಿನಾಂಕ 26/5/2018 ರ ಪತ್ರದಲ್ಲಿ ಸಲ್ಲಿಸಿರುವ ಮಾಹಿತಿಗಳಲ್ಲಿ ಕ್ರಮ ಸಂಖ್ಯೆ 3 ರಲ್ಲಿ 2016-17ನೇ ಸಾಲಿನ ವರ್ಲಕೊಂಡ ಗ್ರಾಮ ಪಂಚಾಯತಿಯ 14ನೇ ಹಣಕಾಸು ಯೋಜನೆಯ ಕ್ರಿಯಾ ಯೋಜನೆಯನ್ನು ಕ್ರಮ ಸಂಖ್ಯೆ.4 ರಲ್ಲಿ ಅನುಷ್ಠಾನಗೊಂಡ ಕಾಮಗಾರಿಗಳ ವಿವರಗಳನ್ನು, ಕ್ರಮ ಸಂಖ್ಯೆ.6 ರಲ್ಲಿ ಗ್ರಾಮ ಪಂಚಾಯತಿಯ ಠರಾವು ದಿನಾಂಕ 5/3/2016 ರ ಪ್ರತಿಯನ್ನು ಮತ್ತು ಕ್ರಮ ಸಂಖ್ಯೆ.7 ರಲ್ಲಿ ಗ್ರಾಮ ಪಂಚಾಯತಿಯ ಠರಾವು ದಿನಾಂಕ 7/5/2016 ರ ಪ್ರತಿಯನ್ನು ಪರಿಶೀಲನೆಗಾಗಿ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ."*

*"ಆಪಾದನೆ-3 ಎಂದು ಪರಿಗಣಿಸಲಾಗಿರುವುದರಲ್ಲಿ ದೂರುದಾರರು ದಿನಾಂಕ 12/01/2018 ರಂದು ಸಲ್ಲಿಸಿರುವ ಪ್ರತ್ಯುತ್ತರ ಪತ್ರದಲ್ಲಿರುವ ಅಂಶಗಳಲ್ಲಿ ಖರೀದಿಸಿರುವ ವಸ್ತುಗಳಿಗೆ ಕೆ.ಟಿ.ಪಿ.ಪಿ. ಅನ್ವಯ ಸಾಮಾಗ್ರಿಗಳನ್ನು ಖರೀದಿಸಿರುವುದಿಲ್ಲ. ಏಕ ಪಕ್ಷೀಯವಾಗಿ ಒಂದೇ*

ಮಳಿಗೆಯಲ್ಲಿ ಮಾರ್ಕೆಟ್‌ದರಕ್ಕಿಂತ ಬಜೆಟ್) ನಿಯಮಗಳು 1995 ರ ಉಪ ಪ್ರಕರಣ 79 ರಂತೆ ಸಾಮಗ್ರಿಗಳನ್ನು ಸರಬರಾಜು ಮಾಡುವುದಕ್ಕೆ ಮತ್ತು ಕಾಮಗಾರಿ ನಿರ್ವಹಣೆ ಬಗ್ಗೆ ಎಲ್ಲಾ ಕರಾರುಗಳಿಗೂ ಗ್ರಾಮ ಪಂಚಾಯತಿಯ ಪರವಾಗಿ ಅಧ್ಯಕ್ಷರು ಸಹಿ ಹಾಕತಕ್ಕದ್ದು, ಸಾಮಗ್ರಿಗಳ ಸರಬರಾಜಿಗೆ ಅಥವಾ ಕಾಮಗಾರಿಗಳ ನಿರ್ವಹಣೆಗಾಗಿ ಕರಾರು ಮಾಡಿಕೊಳ್ಳುವುದಕ್ಕೆ ಮುಂಚೆ ಗ್ರಾಮ ಪಂಚಾಯತಿಯು ಅವಶ್ಯಕವೆಂದು ಪರಿಗಣಿಸುವುದರೊಂದಿಗೆ ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ ಪ್ರದತ್ತವಾದ ಅಧಿಕಾರಿವಿದ್ದು, ಅದರಂತೆ ಅಧಿಕಾರವನ್ನು ನಿಯಮಾವಳಿಗಳಂತೆ ಕರ್ತವ್ಯದಲ್ಲಿ ಬಳಕೆ ಮಾಡಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಕ್ರಮ ಸಂಖ್ಯೆ.13 ರಲ್ಲಿ ಕರ್ನಾಟಕ ಪಾರದರ್ಶಕ ಕಾಯ್ದೆ 1999–2000 ನಿಯಮ 3 ರಲ್ಲಿ ನೀರು ಸರಬರಾಜಿಗೆ ಸಂಬಂಧಪಟ್ಟ ವೆಚ್ಚಗಳ ಬಗ್ಗೆ ಸಾಮಾಗ್ರಿ ಖರೀದಿ/ಸೇವೆಗಳು ಎಂಬ ಬಾಬ್ತಿನಂತೆ ಗ್ರಾಮ ಪಂಚಾಯತಿಗೆ ರೂ.2.00 ಲಕ್ಷದ ಮಿತಿಗೆ ಒಳಪಟ್ಟು ವಿನಾಯಿತಿ ನೀಡಿರುವ ಬಗ್ಗೆ ಗಮನ ಹರಿಸದೆ ಇದ್ದು, ಪರಿಶೀಲಿಸದೆ ಏಕ ಪಕ್ಷೀಯವಾಗಿ ತಮ್ಮ ವಿರುದ್ಧ ಹಣ ದುರುಪಯೋಗ ಬಗ್ಗೆ ವರದಿ ಮಾಡಿರುವುದು ಕಾನೂನು ಬದ್ಧವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಕ್ರಮ ಸಂಖ್ಯೆ.14 ರಲ್ಲಿ ದೂರುದಾರರು ಬಿಲ್ಲುಗಳ ಬಗ್ಗೆ ದೃಢೀಕರಣ ಹಾಗೂ ಅಧ್ಯಕ್ಷರ ಸಹಿಗಳು ಇಲ್ಲವೆಂದು ಹಾಗೂ ಕೊಟೇಷನ್ ಬಿಲ್ಲುಗಳನ್ನು ಮಾಹಿತಿ ಹಕ್ಕು ಅಧಿನಿಯಮದಲ್ಲಿ ನೀಡಿರುವ ಮಾಹಿತಿಯಲ್ಲಿ ಸಲ್ಲಿಸಿರುವುದಿಲ್ಲವೆಂದು ಹಾಗೂ ದರ ಪಟ್ಟಿಗಳಿಗೂ ಹಾಗೂ ಸರಬರಾಜು ಬಿಲ್ಲುಗಳಿಗೂ ವ್ಯತ್ಯಾಸವಿರುತ್ತದೆ, ಅನಧಿಕೃತವಾಗಿ ಅನುದಾನ ವೆಚ್ಚ ಮಾಡಿರುತ್ತಾರೆ ಆರೋಪಿಸಿರುವುದು ನ್ಯಾಯ ಸಮ್ಮತವಾಗಿರುವುದಿಲ್ಲ. ಈ ಬಗ್ಗೆ ಮೂಲ ದಾಖಲಾತಿಗಳ ಕಡತಗಳನ್ನು ಪರಿಶೀಲಿಸದೆ ಸದರಿಯವರು ವರ್ಗಾವಣೆಯಾದ ನಿಯೋಜಿತ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ಮಾಹಿತಿ ನೀಡಿರುವುದು ಕಂಡು ಬಂದಿದ್ದು, ಸದರಿ ಮೂಲ ದಾಖಲೆಗಳನ್ನು ಸ್ಥಳೀಯ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿದ್ದು, ಯಾವುದೇ ಆಕ್ಷೇಪಣೆ ಮತ್ತು ವಸೂಲಾತಿಗೆ ಲೆಕ್ಕ ಪರಿಶೋಧನೆಯಲ್ಲಿ ನಮೂದಿಸಿರುವುದಿಲ್ಲ ಎಂದು ಉತ್ತರ ಸಲ್ಲಿಸಿರುತ್ತಾರೆ."

"ಆಪಾದನೆ-4 ಎಂದು ಪರಿಗಣಿಸಲಾಗಿರುವುದರಲ್ಲಿ ದೂರುದಾರರು ದಿನಾಂಕ 12/1/2018 ರಂದು ಸಲ್ಲಿಸಿರುವ ಪ್ರತ್ಯುತ್ತರ ಪತ್ರದಲ್ಲಿರುವ ಅಂಶಗಳಲ್ಲಿ ಪ್ರತಿ ವೋಚರ್‌ನ ಹಿಂಬದಿಯಲ್ಲಿ ದೃಢೀಕರಣ ಮಾಡಿ ದಾಸ್ತಾನು ವಹಿಗೆ ತೆಗೆದುಕೊಂಡಂತೆ ಸಹಿ ಮಾಡಿರುವುದಿಲ್ಲ ಇವರು ನೀಡಿರುವ ವೋಚರ್‌ಗಳು ನಗದುವಹಿಯ ವಹಿವಾಟಿನ ಅನ್ವಯ ಕ್ರಮಸಂಖ್ಯೆಗಳನ್ನು ನಮೂದಿಸಿರುವುದಿಲ್ಲ."

"ಎದುರುದಾರರು ದಿನಾಂಕ ದಿನಾಂಕ 26/5/2018 ರ ಪತ್ರದಲ್ಲಿ ಸಲ್ಲಿಸಿರುವ ಮಾಹಿತಿಗಳಲ್ಲಿ ಕ್ರಮ ಸಂಖ್ಯೆ 9 ರಲ್ಲಿ ತಿಳಿಸಿರುವ ಅಂಶಗಳಲ್ಲಿ ದೂರುದಾರರು ಆಕ್ಷೇಪಿಸಿರುವಂತೆ ದೂರುದಾರರು ಆಪಾದಿಸಿರುವಂತೆ ವೋಚರ್ ಮತ್ತು ಬಿಲ್ಲುಗಳಲ್ಲಿ ಯಾವುದೇ ವಂಚನೆಯನ್ನು ಮಾಡಿರುವುದಿಲ್ಲ ಹಾಗೂ ವ್ಯಾಟ್ ಮತ್ತು ಸೇವಾ ತೆರಿಗೆಗಳ ಬಿಲ್ಲುಗಳಲ್ಲಿ ಸರಬರಾಜುದಾರರ ದರಪಟ್ಟಿಯಂತೆ ಕಟಾವುಗೊಳಿಸಿ ಗ್ರಾಮ ಪಂಚಾಯತಿಗೆ ಸಾಮಗ್ರಿಗಳನ್ನು ಅಧ್ಯಕ್ಷರ ಕರಾರು ಪತ್ರದಂತೆ ಸರಬರಾಜು ಮಾಡಿರುತ್ತಾರೆ. ನಾನು ಪ್ರತ್ಯೇಕವಾಗಿ ವ್ಯಾಟ್ ಮತ್ತು ಸೇವಾ ತೆರಿಗೆಗಳನ್ನು ಸರಬರಾಜುದಾರರಿಂದ ಕಟಾವುಗೊಳಿಸಬೇಕಾಗಿರುವುದಿಲ್ಲ. ಸರಬರಾಜುದಾರರು ಬಿಲ್ಲುಗಳಲ್ಲಿ ಟಿನ್ ನಂಬರನ್ನು ನಮೂದಿಸಿದ್ದು, ಅವರ ವಹಿವಾಟಿಗೆ ಸಂಬಂಧಿಸಿದಂತೆ ನೇರವಾಗಿ ವಾಣಿಜ್ಯ ತೆರಿಗೆ ಇಲಾಖೆಗೆ ನೋಂದಣಿ ಸಂಖ್ಯೆಗೆ ಸಂದಾಯ ಮಾಡಿದ್ದು, ಈ ಬಗ್ಗೆ

ದೂರುದಾರರು ಆಕ್ಷೇಪಿಸಿರುವುದಕ್ಕೆ ಯಾವುದೇ ವಿಧವಾದ ಸಂಬಂಧಪಟ್ಟ ಸಾಕ್ಷ್ಯಾಧಾರಗಳನ್ನು ಸಲ್ಲಿಸಿರುವುದಿಲ್ಲ. ಆದ ಕಾರಣ ದೂರುದಾರರ ಕ್ರಮ ಸಂಖ್ಯೆ.1 ಕಟಾವುಗೊಳಿಸಬೇಕಾಗಿರುವುದಿಲ್ಲ. ಸರಬರಾಜುದಾರರು ಬಿಲ್ಲುಗಳಲ್ಲಿ ಟಿನ್ ನಂಬರನ್ನು ನಮೂದಿಸಿದ್ದು, ಅವರ ವಹಿವಾಟಿಗೆ ಸಂಬಂಧಿಸಿದಂತೆ ನೇರವಾಗಿ ವಾಣಿಜ್ಯ ತೆರಿಗೆ ಇಲಾಖೆಗೆ ನೋಂದಣಿ ಸಂಖ್ಯೆಗೆ ಸಂದಾಯ ಮಾಡಿದ್ದು, ಈ ಬಗ್ಗೆ ದೂರುದಾರರು ಆಕ್ಷೇಪಿಸಿರುವುದಕ್ಕೆ ಯಾವುದೇ ವಿಧವಾದ ಸಂಬಂಧಪಟ್ಟ ಸಾಕ್ಷ್ಯಾಧಾರಗಳನ್ನು ಸಲ್ಲಿಸಿರುವುದಿಲ್ಲ. ಆದ ಕಾರಣ ದೂರುದಾರರ ಕ್ರಮ ಸಂಖ್ಯೆ.1 ರಿಂದ 56 ರವರೆಗೆ ನಮೂದಿಸಿರುವ ಆಕ್ಷೇಪಣೆಗಳು ಆಧಾರ ರಹಿತವಾಗಿರುತ್ತವೆ. ವಾಣಿಜ್ಯ ತೆರಿಗೆ ಇಲಾಖೆಯಿಂದ ಸರಬರಾಜುದಾರರ ಬಗ್ಗೆ ಯಾವುದೇ ಮಾಹಿತಿಯನ್ನು ಪಡೆಯದೆ ನಮ್ಮಿಂದ ಪ್ರತಿಫಲವನ್ನು ಪಡೆಯುವ ಉದ್ದೇಶದಿಂದ ಅನಾವಶ್ಯಕವಾಗಿ ಗ್ರಾಮ ಪಂಚಾಯತಿಗಳಿಗೆ ಮಾಹಿತಿ ಹಕ್ಕು ಅಧಿನಿಯಮದಂತೆ ನಮೂನೆ-1ನ್ನು ನಿಯಮಬಾಹಿರವಾಗಿ ಸಲ್ಲಿಸುವುದು ದೂರುದಾರರ ಏಕೈಕ ಉದ್ದೇಶವಾಗಿರುತ್ತದೆ. ಆದ ಕಾರಣ ದೂರುದಾರರು ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಬೇಕಾಗಿ ಉತ್ತರ ಸಲ್ಲಿಸಿರುತ್ತಾರೆ."

"ಗುತ್ತಿಗೆದಾರರಿಂದ ಹಣ ಸಂದ ರಸೀದಿ ಮೂಲಕ ರೂ.5,000/- ಗಳಿಗಿಂತ ಹೆಚ್ಚು ರೂ.50,000/- ಗಳಿಗಿಂತ ಕಡಿಮೆ ಪಾವತಿಸಿದ್ದು, ಪಾವತಿಸಿದ ಸಂಬಂಧ ಯಾವ ಯಾವ ಕಾರ್ಯಗಳನ್ನು ಗುತ್ತಿಗೆದಾರರು ಮಾಡಿರುತ್ತಾರೆ ಎಂಬುದಕ್ಕೆ ಯಾವುದೇ ವೋಚರ್ಸ್‌ಗಳನ್ನು ಸಲ್ಲಿಸದಿರುವುದರಿಂದ ಕರ್ತವ್ಯಲೋಪವೆಂದು ಪರಿಗಣಿಸಲು ಲೆಕ್ಕ ತನಿಖೆಯ ಅಭಿಪ್ರಾಯವಾಗಿರುತ್ತದೆ."

"ವಾಣಿಜ್ಯ ತೆರಿಗೆ ಅಧಿಕಾರಿಯವರು ದಿನಾಂಕ 5/11/2018 ರಂದು ಸಲ್ಲಿಸಿರುವ ವರದಿಯ ಪುಟ ಸಂಖ್ಯೆ.3 ರಿಂದ 6 ರವರೆಗೆ ವಿವರಿಸಿರುವ ಅನ್ವಯ:"

| ಕ್ರ. ಸಂ. | ಬಿಲ್ಲಿನ ಸಂಖ್ಯೆ | ದಿನಾಂಕ | ಬಿಲ್ಲಿನ ಮೊತ್ತ | ಷರಾ |
|---|---|---|---|---|
| 1 | 230 | 08/07/2016 | 22,206/- | ಈ ಬಿಲ್ಲುಗಳನ್ನು 2016-17ನೇ ಸಾಲಿನಲ್ಲಿ ಗ್ರಾಮ ಪಂಚಾಯತಿಗೆ ಮಾರಾಟಮಾಡಿಲ್ಲವೆಂದು ಮಾರಾಟಗಾರರು ತಿಳಿಸಿರುತ್ತಾರೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. |
| 2 | 231 | 08/09/2016 | 07,806/- | |
| 3 | 232 | 08/07/2016 | 15,569/- | |
| | | ಒಟ್ಟು ಮೊತ್ತ ರೂ. | **45,581/-** | |

"ಸದರಿ ಮೊತ್ತ ರೂ.**45,581/-** ಗಳನ್ನು 2016/17ನೇ ಸಾಲಿನಲ್ಲಿ ಪಾವತಿಸಿರುವ ಲೆಕ್ಕಕ್ಕೆ ಸೇರಿಸಿ, ಲೆಕ್ಕ ಪತ್ರ ನಿರ್ವಹಣೆಯಲ್ಲಿ ಮಾಡಿರುವ ಹಣ ದುರುಪಯೋಗ ಆಗಿರುವುದಾಗಿ ಲೆಕ್ಕ ತನಿಖೆಯಲ್ಲಿ ಪರಿಗಣಿಸಿದೆ."

"14ನೇ ಹಣಕಾಸು ಯೋಜನೆ ಖಾತೆಗೆ ಸಂಬಂಧಿಸಿದಂತೆ, ಕೆಳ ಕಾಣಿಸಿರುವ ಅಂಶಗಳನ್ನು ಗಮನಿಸಿ, ಕಾಲಕಾಲಕ್ಕೆ ದಾಖಲಾತಿಗಳನ್ನು/ಬಿಲ್ಲುಗಳನ್ನು/ಖರೀದಿ ಸಾಮಾಗ್ರಿಗಳನ್ನು ಸಾಮಾಗ್ರಿವಾರು ದಾಸ್ತಾನು ವಹಿಯ ಲೆಕ್ಕಕ್ಕೆ ತೆಗೆದುಕೊಂಡು, ಸಾಮಾಗ್ರಿವಾರು ವಿತರಣೆ ವಹಿಗಳ

ಮೂಲಕ ಸಂಬಂಧಿಸಿದ ಕೆಲಸಗಳಿಗೆ ಉಪಯೋಗಿಸಲು ನೀಡಿ ಸ್ವೀಕೃತಿ ಪಡೆಯುವ ಜವಾಬ್ದಾರಿ ಕಾರ್ಯಗಳನ್ನು ನಿರ್ವಹಿಸಿದ ಬಗ್ಗೆ ಸೂಕ್ತ ದಾಖಲಾತಿಗಳನ್ನು ಈ ಸಂಸ್ಥೆಗೆ ಸಲ್ಲಿಸಿರುವುದಿಲ್ಲ."

"ಚೆಕ್ಕುಗಳನ್ನು ಸಂಬಂಧಿಸಿದವರಿಗೆ ನೀಡಿ ಸ್ವೀಕೃತಿ ಪಡೆಯದಿರುವುದು."

"ನಡವಳಿ ಪುಸ್ತಕಗಲ್ಲಿ ನಿಯಮಾನುಸಾರ ಸಭೆಯಲ್ಲಿ ಹಾಜರಿದ್ದವರ ಸದಸ್ಯರುಗಳಿಂದ ಸಭೆ ಮುಕ್ತಾಯದ ವಿವರ ದಾಖಲಿಸಿದ ನಂತರ ಸಹಿ ಪಡೆಯದಿರುವುದು."

"ನಡವಳಿಯಲ್ಲಿ ಒಟ್ಟು ರೂ.9,46,624/- ಗಳಿಗೆ ಅನುಮೋದಿಸಿದ ಮೊತ್ತಕ್ಕಿಂತ ಹೆಚ್ಚುವರಿಯಾಗಿ ರೂ.3,45,363/- ಗಳನ್ನು ಖರ್ಚು ಮಾಡಿರುವುದು, ಹೆಚ್ಚುವರಿಯಾದ ಮೊತ್ತ ರೂ.3,45,363/- ಅನುಮೋದನೆ ಪಡೆಯದಿರುವುದು."

"ಚೆಕ್ ಸಂಖ್ಯೆ.635369 ರ ಮೂಲಕ ಚೆಕ್ ಮೊತ್ತ ರೂ.74680/- ಗಳನ್ನು ಶ್ರೀ.ಲಕ್ಷ್ಮೀ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ಸ್ ರವರಿಗೆ ಬಿಲ್ ಮೊತ್ತಕ್ಕಿಂತ ರೂ.309/- ಗಳನ್ನು ಹೆಚ್ಚುವರಿಯಾಗಿ ನೀಡಿರುವುದು."

"ಅಂಗಡಿ ಮಾಲೀಕರಿಂದ ಬಿಲ್‌ಗಳನ್ನು ಪಡೆದಿರುವ ಒಟ್ಟು ಮೊತ್ತಗಳಿಗೂ ಚೆಕ್ ಪಾವತಿಸಿರುವ ಮೊತ್ತಕ್ಕೂ ವ್ಯತ್ಯಾಸವಿದ್ದು, ಕಡಿಮೆ ಪಾವತಿಸಿದ್ದು, ಪಡೆದ ಬಿಲ್ಲುಗಳನ್ನು ಪೂರ್ಣವಾಗಿ ಪರಿಶೀಲಿಸದೇ ಹಣ ಪಾವತಿಸಿರುವುದು."

"ಖರೀದಿ ನಿಯಮಗಳನ್ನು ಮಾರ್ಗಸೂಚಿಗಳನ್ನು ಹಾಗೂ ಸುತ್ತೋಲೆಗಳಲ್ಲಿ ನೀಡಿರುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸದೇ, ಖರೀದಿಸಬೇಕಾಗಿದ್ದ ಅಗತ್ಯ ಸಾಮಾಗ್ರಿಗಳಿಗೆ ದರ ಪಟ್ಟಿ ಪಡೆದು ತುಲನಾತ್ಮಕ ಪಟ್ಟಿ ತಯಾರಿಸಿ, ಅನುಮೋದಿಸಿದ ನಂತರ ಹಣ ಪಾವತಿಸಲು ಕ್ರಮ ಕೈಗೊಳ್ಳದೇ ಹಣ ಪಾವತಿಗೆ ಕ್ರಮ ಕೈಗೊಂಡಿರುವುದು."

"ವಿವಿಧ ಲೆಕ್ಕ ಶೀರ್ಷಿಕೆಗಳಡಿ ಡಿಸೆಂಬರ್ 2016 ರಲ್ಲಿ ಆದಾಯ ತೆರಿಗೆ, ರಾಜಧನ ಮಾರಾಟ ತೆರಿಗೆ ಮತ್ತು ಕಾರ್ಮಿಕ ಕಲ್ಯಾಣ ನಿಧಿ ಇವುಗಳ ಖಾತೆಗಳಿಗೆ ಒಟ್ಟು ರೂ.11,730/- ಗಳನ್ನು ಜಮಾ ಮಾಡಿರುವುದಕ್ಕೆ ಸಂಬಂಧಿಸಿದ ಇಲಾಖೆಯ ಸ್ವೀಕೃತಿ ಪತ್ರಗಳ ದಾಖಲಾತಿಗಳನ್ನು ಸಲ್ಲಿಸದಿರುವುದು."

"ವರ್ಲಕೊಂಡ ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲಿ ಚರಂಡಿ ಮತ್ತು ನೈರ್ಮಲ್ಯ ಕಾಮಗಾರಿಯನ್ನು ಗುತ್ತಿಗೆದಾರರಿಂದ ಮಾಡಿಸಿದ್ದು, ಗುತ್ತಿಗೆದಾರರಿಗೆ ಒಟ್ಟು ಮೊತ್ತ ರೂ.86,000/- ಗಳನ್ನು ಚೆಕ್ ಸಂಖ್ಯೆ 630443 ದಿನಾಂಕ 10/12/2016 ರಲ್ಲಿ ರೂ.65,000/- ಮತ್ತು ಚೆಕ್ ಸಂಖ್ಯೆ 630446 ದಿನಾಂಕ 15/12/2016 ರಲ್ಲಿ ರೂ.21000/- ಗಳ ಮೂಲಕ ಪಾವತಿಸಿರುತ್ತಾರೆ, ಆದರೆ ಬಿಲ್ಲಿನ ಒಟ್ಟು ಮೊತ್ತ ರೂ.94138/- ಗಳಲ್ಲಿ ಹೊಂದಾಣಿಕೆ ಮೊತ್ತ ರೂ.8000/- ಗಳನ್ನು ಸದರಿ ಬಿಲ್ಲಿನಲ್ಲಿ ಕಟಾಯಿಸಿದ್ದು, ಹೊಂದಾಣಿಕೆ ಮೊತ್ತಗಳನ್ನು ಸಂಬಂಧಿಸಿದ ಲೆಕ್ಕ ಶೀರ್ಷಿಕೆಗಳಿಗೆ ಪಾವತಿಸಿರುವುದಿಲ್ಲ ಅಥವಾ ಪಾವತಿಸಬೇಕಾದ ಲೆಕ್ಕಕ್ಕೂ ತೆಗೆದುಕೊಂಡಿರುವುದಿಲ್ಲ."

"ಸದರಿ ತನಿಖಾ ವರದಿ ಕುರಿತಂತೆ ಅನುಸರಿಸಿದ ತನಿಖಾ ವಿಧಾನದಲ್ಲಿ ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಚಿಕ್ಕಬಳ್ಳಾಪುರ ರವರು ಸಲ್ಲಿಸಿರುವ 2016-17ನೇ ಸಾಲಿನ ಲೆಕ್ಕ

ತಪಾಸಣಾ ವರದಿಗಳಲ್ಲಿನ ಕಂಡಿಕೆ (38), (40), (48) ಮತ್ತು [(53)(9)] ಗಳಲ್ಲಿ ಲೆಕ್ಕ ಪರಿಶೋಧನೆ ಸಮಯದಲ್ಲಿ ಕಂಡುಬಂದಂತಹ ನ್ಯೂನತೆಗಳ ಬಗ್ಗೆ ತಿಳಿಸಿರುವುದು."

"ದೂರುದಾರರು ಆಪಾದಿಸಿರುವ ಆಪಾದನೆಗಳಿಗೆ ಲಭ್ಯವಿರುವ ಹಾಗೂ ಸಲ್ಲಿಸಿರುವ ವರದಿ ಮತ್ತು ದಾಖಲಾತಿಗಳ ಆಧಾರದನ್ವಯ ಪರಿಶೀಲಿಸಿದ್ದು, ಚಿಕ್ಕಬಳ್ಳಾಪುರ ಜಿಲ್ಲೆ, ವರ್ಲಕೊಂಡ ಗ್ರಾಮಪಂಚಾಯತಿಯ 2016-17ನೇ ಸಾಲಿನಲ್ಲಿ ಇಬ್ಬರು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಕಾರ್ಯನಿರ್ವಹಿಸಿದ್ದು, ದೂರಿನಲ್ಲಿ ಹೆಸರಿಸಿರುವ ಶ್ರೀ.ಕೆ.ಶ್ರೀನಿವಾಸಮೂರ್ತಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು ದಿನಾಂಕ 1/4/2016 ರಿಂದ ದಿನಾಂಕ 15/12/2016 ರವರೆಗೆ ಕಾರ್ಯನಿರ್ವಹಿಸಿದ ಅವಧಿಗೆ 14ನೇ ಹಣಕಾಸು ಯೋಜನೆ ಖಾತೆಯಲ್ಲಿ ನಿರ್ವಹಿಸಿರುವ ದಾಖಲಾತಿಗಳಲ್ಲಿ ದೂರುದಾರರು ಮಾಡಿರುವ ಆರೋಪಗಳು ಸಾಬೀತಾಗಿದ್ದು, ನಿಯಮ, ಸುತ್ತೋಲೆ ಮತ್ತು ಮಾರ್ಗಸೂಚಿಗಳನ್ನು ಗಮನಿಸಿ ಕಾಲಕಾಲಕ್ಕೆ ಕ್ರಮ ವಹಿಸದೇ ಕರ್ತವ್ಯಲೋಪ ಮಾಡಿರುವುದು, ಹೆಚ್ಚುವರಿ ಮೊತ್ತ ರೂ.309/- ಗಳನ್ನು ಪಾವತಿಸಿರುವುದು, ಬಿಲ್ಲುಗಳಿಗಿಂತ ಕಡಿಮೆ ಮೊತ್ತಗಳನ್ನು ಪಾವತಿಸಿರುವುದು ಶಾಸನ ಬದ್ಧ ತೆರಿಗೆಗಳನ್ನು ಕಟಾಯಿಸಿದ್ದು, ಪಾವತಿಸದಿರುವುದು ಹಿಂದಿನ 2013-14ನೇ ಸಾಲಿನ ಆರ್ಥಿಕ ವರ್ಷದಲ್ಲಿ ಅಂಗೀಕರಿಸಿದ ಬಿಲ್ಲುಗಳನ್ನು ಮತ್ತೊಮ್ಮೆ 2016-17ನೇ ಸಾಲಿನಲ್ಲಿ ಅಂಗೀಕರಿಸಿ ಪಾವತಿಸಿರುವುದು. ಸದರಿ ವರದಿಯಲ್ಲಿ ವಿವರಿಸಿರುವಂತೆ ಎದುರುದಾರರು ಕರ್ತವ್ಯಲೋಪ ಮಾಡಿರುವುದಾಗಿ ಲೆಕ್ಕ ಪರಿಶೋಧನಾ ತನಿಖೆಯಲ್ಲಿ ಅಭಿಪ್ರಾಯಪಡಲಾಗಿದೆ."

"ಶ್ರೀ.ಬಿ.ಆರ್.ಫಣೀಂದ್ರ, (2ನೇ ಎದುರುದಾರರು) ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ದಿನಾಂಕ 16/12/2016 ರಿಂದ 31/3/2017 ರವರೆಗೆ ಮತ್ತು ಇದುವರೆವಿಗೂ ಕಾರ್ಯನಿರ್ವಹಿಸುತ್ತಿದ್ದು, ಸದರಿ ಅವಧಿಯಲ್ಲಿ ಖರ್ಚು ಮಾಡಿರುವ ಒಟ್ಟು ಮೊತ್ತ ರೂ.4,85,609/- ಗಳಿಗೆ ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಹಾಗೂ ಸದರಿಯವರ ಮೇಲೆ ಈ ಸಂಸ್ಥೆಯಲ್ಲಿ ದೂರು ದಾಖಲಾಗಿರುವುದಿಲ್ಲ. ಇದನ್ನು ತಮ್ಮ ಅವಗಾಹನೆಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ."

"ಮೇಲ್ಕಂಡ ಕಂಡಿಕೆಗಳಲ್ಲಿ ವಿವರಿಸಿರುವಂತೆ ಚಿಕ್ಕಬಳ್ಳಾಪುರ ಜಿಲ್ಲೆ, ಗುಡಿಬಂಡೆ ತಾಲ್ಲೂಕು, ವರ್ಲಕುಂಡ ಗ್ರಾಮ ಪಂಚಾಯತಿಯಲ್ಲಿ 14ನೇ ಹಣಕಾಸು ಯೋಜನೆಯಲ್ಲಿ ನಿಯಮಾನುಸಾರ ಲೆಕ್ಕಪತ್ರ ದಾಖಲಾತಿ ನಿರ್ವಹಣೆ ಮಾಡದಿರುವುದು, ಅಂಗಡಿಯಿಂದ ಪಡೆದಿದ್ದ ನಗದು/ಕ್ರೆಡಿಟ್ ಬಿಲ್ಲುಗಳ ದುರುಪಯೋಗ ಮಾಡಿರುವುದು, ರೂ.309/- ಗಳನ್ನು ಹೆಚ್ಚುವರಿಯಾಗಿ ಪಾವತಿಸಿರುವುದು, ರೂ.45,581/- ಗಳನ್ನು 2016-17ನೇ ಸಾಲಿನಲ್ಲಿ ಪಾವತಿಸಿರುವ ಲೆಕ್ಕಕ್ಕೆ ಸೇರಿಸಿ, ಲೆಕ್ಕ ಪತ್ರ ನಿರ್ವಹಣೆಯಲ್ಲಿ ಮಾಡಿರುವ ಹಣದುರುಪಯೋಗ ಆಗಿರುವುದು, ಪಾವತಿಗೆ ಸಂಬಂಧಿಸಿದಂತೆ ಅವಶ್ಯಕವಾದ ಪೂರಕ ದಾಖಲೆಗಳನ್ನು ಸಲ್ಲಿಸದೆ ಕರ್ತವ್ಯಲೋಪ ಮಾಡಿರುವುದರಿಂದ ದೂರುದಾರರು ಸಲ್ಲಿಸಿರುವ ಆಪಾದನೆಗಳು ಲೆಕ್ಕ ತನಿಖೆಯಲ್ಲಿ ಸಾಬೀತಾಗಿರುತ್ತದೆ. ಆದುದರಿಂದ ಈ ಮೇಲ್ಕಂಡ ಕಂಡಿಕೆಗಳಲ್ಲಿ ಸಾಬೀತಾಗಿರುವ ಆರೋಪಗಳು ಹಾಗೂ ದಾಖಲಾತಿಗಳನ್ನು ಸಲ್ಲಿಸದಿರುವ ಕೆಳಕಂಡ ಅಧಿಕಾರಿಗಳು ಜವಾಬ್ದಾರರಾಗಿರುತ್ತಾರೆ."

| ಕ್ರ. ಸಂ. | ಅಧಿಕಾರಿಗಳ ವಿವರ | ಅವಧಿ | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಕಚೇರಿ ವಿಳಾಸ & ದೂರವಾಣಿ ಸಂಖ್ಯೆ. |
|---|---|---|---|
| 1 | ಎದುರುದಾರರಾದ ಶ್ರೀ.ಕೆ.ಶ್ರೀನಿವಾಸಮೂರ್ತಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, | 1/4/2014 ರಿಂದ 15/12/2016 | ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಂಪಸಂದ್ರ ಗ್ರಾಮ ಪಂಚಾಯತಿ |
| 2 | ಶ್ರೀ.ಬಿ.ಆರ್.ಫಣೀಂದ್ರ ಪಂಚಾಯತಿ ಅಭಿವೃದ್ಧಿ ಅಧಿಕಾರಿ | 16/12/2016 ರಿಂದ 31/3/2017 | ಪಂಚಾಯತಿ ಅಭಿವೃದ್ಧಿ ಅಧಿಕಾರಿ, ವರ್ಲಕುಂಡ ಗ್ರಾಮ ಪಂಚಾಯತಿ. |

7. ಸದರಿ ವರದಿಯ ಆಧಾರದ ಮೇರೆಗೆ ಶ್ರೀ.ಬಿ.ಆರ್.ಫಣೀಂದ್ರ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ವರ್ಲಕೊಂಡ ಗ್ರಾಮಪಂಚಾಯಿತಿ, ಇವರನ್ನು 2ನೇ ಎದುರುದಾರರನ್ನಾಗಿ ಸೇರ್ಪಡೆಗೊಳಿಸಲಾಯಿತು.

8. ಖಂಡಿಕೆ 82(ಎ) ರನ್ವಯ 1 ಮತ್ತು 2ನೇ ಎದುರುದಾರರಿಗೆ ತನಿಖಾ ವರದಿಯ ಪ್ರತಿಯನ್ನು ಕಳುಹಿಸಿ, ಸದರಿ ತನಿಖಾ ವರದಿಗೆ ಆಕ್ಷೇಪಣೆ ಸಲ್ಲಿಸುವಂತೆ ಆದೇಶಿಸಲಾಯಿತು.

9. ಅದರಂತೆ, 1ನೇ ಎದುರುದಾರರು ದಿ.15/3/2021 ರಂದು ತನಿಖಾ ವರದಿಯ ಮೇಲೆ ಆಕ್ಷೇಪಣೆ ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ಸದರಿ 1ನೇ ಎದುರುದಾರರು ದಿ.1/4/2014 ರಿಂದ 15/12/2016 ರ ವರೆಗೆ ಪಿ.ಡಿ.ಓ. ಆಗಿ ಕರ್ತವ್ಯ ನಿರ್ವಹಿಸಿದ್ದು, ಸಂಬಂಧಪಟ್ಟ ದಾಖಲೆಗಳನ್ನು ತನಿಖಾಧಿಕಾರಿಗಳಾದ ಲೆಕ್ಕ ಅಧೀಕ್ಷಕರು–1, ತಾಂತ್ರಿಕ ವಿಭಾಗ, ಇವರಿಗೆ ಪರಿಶೀಲನೆಗಾಗಿ ಸಲ್ಲಿಸಿರುತ್ತೇನೆ.

10. ಶ್ರೀ.ಬಿ.ಆರ್.ಫಣೀಂದ್ರ (2ನೇ ಎದುರುದಾರರು) ರವರು ಸದರಿ ಪಂಚಾಯಿತಿಯ ಪಿ.ಡಿ.ಓ. ಆಗಿ ದಿ.16/12/2016 ರಿಂದ 31/3/2017 ರವರೆಗೆ ಕಾರ್ಯನಿರ್ವಹಿಸಿದ್ದು, ಸದರಿಯವರ ಅವಧಿಯಲ್ಲಿ 14ನೇ ಹಣಕಾಸು ಯೋಜನೆಯಲ್ಲಿ ರೂ.4,85,609/– ಗಳನ್ನು ವೆಚ್ಚ ಮಾಡಿದ್ದು, ಈ ಬಗ್ಗೆ ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲವೆಂದು ತನಿಖಾಧಿಕಾರಿಯವರು ವರದಿಯ ಪುಟ ಸಂ.79 ರಿಂದ 80 ರಲ್ಲಿ 06.23 ಕಾಲಂನಲ್ಲಿ ನಮೂದಿಸಿರುತ್ತಾರೆ. ಆ ಕುರಿತು ಸದರಿ ಲೋಕಾಯುಕ್ತ ಸಂಸ್ಥೆಯಲ್ಲಿ ದೂರು ದಾಖಲಾಗಿರುವುದಿಲ್ಲವೆಂದು ವರದಿಯಲ್ಲಿ ಸಲ್ಲಿಸಿ, ಅವರ ವಿರುದ್ಧ ಯಾವುದೇ ಕ್ರಮಕ್ಕೆ ಶಿಫಾರಸ್ಸು ಮಾಡಿರುವುದಿಲ್ಲ. ಆ ಕಾರಣ ಮತ್ತೊಮ್ಮೆ ಮೇಲ್ಕಂಡ ಮೊತ್ತಕ್ಕೆ ಬಿಲ್‌ಗಳನ್ನು ಪಡೆದು ಪರಿಶೀಲಿಸಬೇಕಾಗಿ ಮನವಿ ಮಾಡಿರುತ್ತೇನೆ.

11. ತನಿಖಾ ವರದಿಯ ಕ್ರ.ಸಂ.06.22 ರಲ್ಲಿ ತನಿಖಾಧಿಕಾರಿಯವರು ಸದರಿ 1ನೇ ಎದುರುದಾರರ ಕರ್ತವ್ಯದ ಅವಧಿ 2013–14ನೇ ಸಾಲಿನಲ್ಲಿ ಅಂಗೀಕರಿಸಿದ ಬಿಲ್ ಮೊತ್ತವನ್ನು 2016–17ನೇ ಸಾಲಿನಲ್ಲಿ ಅಂಗೀಕರಿಸಿ ಪಾವತಿಸಿರುತ್ತೇನೆಂದು ವರದಿಯಲ್ಲಿ ನಮೂದಿಸಿ ಕರ್ತವ್ಯಲೋಪ ಎಸಗಿರುತ್ತೇನೆಂದು ಆಪಾದಿಸಿರುತ್ತಾರೆ. ಆದರೆ, 2013–14ನೇ ಬಿಲ್ ಅದೇ ಸಾಲಿನಲ್ಲಿ ಪಾವತಿಯಾಗಿರುತ್ತದೆ. ಪುನಃ 2016–17ನೇ ಸಾಲಿನಲ್ಲಿ ವಿವಾದಿತ ಬಿಲ್‌ಗೆ ಅನುದಾನ ಪಾವತಿಸಿರುವುದಿಲ್ಲ. ಆ ಕುರಿತು ಜೆರಾಕ್ಸ್ ಪ್ರತಿಗಳನ್ನು ತನಿಖೆಗೆ ಸಲ್ಲಿಸುವ

ಸಮಯದಲ್ಲಿ ಪುನರಾವರ್ತನೆಯಾಗಿರುತ್ತದೆ. ಈ ಬಗ್ಗೆ ನಿಯಮಾನುಸಾರ ಸದರಿ ವಿವಾದಿತ ಬಿಲ್ಲನ್ನು ಲೆಕ್ಕ ಅಧೀಕ್ಷಕರು ಪರಿಶೀಲಿಸದೆ, 2016-17ನೇ ಸಾಲಿನಲ್ಲಿ ಪಾವತಿಯಾಗಿರುತ್ತದೆ ಎನ್ನುವುದಕ್ಕೆ ನಿಖರವಾಗಿ ಸಾಕ್ಷೀಕರಿಸುವ ದಾಖಲೆಯನ್ನು ಸಲ್ಲಿಸಿರುವುದಿಲ್ಲ.

12. ವರದಿಯಲ್ಲಿ 06.24 ಕಂಡಿಕೆಯಲ್ಲಿ 14ನೇ ಹಣಕಾಸು ಯೋಜನೆಯಲ್ಲಿ ಅಂಗಡಿಯಿಂದ ಪಡೆದ ನಗದು ಬಿಲ್‌ಗಳಲ್ಲಿ ರೂ.309/- ಹೆಚ್ಚುವರಿಯಾಗಿ ಪಾವತಿಸಿ, ರೂ.45,580/- ಗಳನ್ನು 2016-17ನೇ ಸಾಲಿನಲ್ಲಿ ಲೆಕ್ಕಕ್ಕೆ ಸೇರಿಸಿರುತ್ತಾರೆಂದು ದಾಖಲೆಗಳ ನಿರ್ವಹಣೆಯಲ್ಲಿ ನಿಯಮಾನುಸಾರ ನಿರ್ವಹಿಸಿರುವುದಿಲ್ಲವೆಂದು ಆರೋಪಿಸಿ ಕರ್ತವ್ಯಲೋಪ ಎಸಗಿರುವುದು ಸಾಬೀತಾಗಿರುತ್ತದೆಯೆಂದು ವರದಿಯಲ್ಲಿ ನಮೂದಿಸಿರುವುದು ನಿಯಮಬಾಹಿರವಾಗಿರುತ್ತದೆಯೆಂದು ಕಂಡುಬಂದಿರುತ್ತದೆ. ಆ ಕುರಿತು ಸದರಿ ಎದುರುದಾರರು ನಿಖರವಾದ ದಾಖಲಾತಿಗಳನ್ನು ತನಿಖಾಧಿಕಾರಿಗಳಿಗೆ ಸಲ್ಲಿಸಿದ್ದು, ಕಂಡಿಕೆ 06.23 ರಲ್ಲಿ ನಮೂದಿಸಿರುವಂತೆ ಸದರಿ ಪ್ರಕರಣದಲ್ಲಿ ಶ್ರೀ.ಬಿ.ಆರ್.ಫಣೀಂದ್ರ ರವರ ವಿರುದ್ಧ ಪುಟ ಸಂ.80 ರಲ್ಲಿ ಆರೋಪಿಸಿರುತ್ತಾರೆ.

13. ಕಂಡಿಕೆ 06.21 ರಲ್ಲಿ ನಮೂದಿಸಿರುವಂತೆ, ಸದರಿ ವರದಿಯಲ್ಲಿ ನಮೂದಿಸಿರುವ ಕಂಡಿಕೆವಾರು ನ್ಯೂನತೆಗಳ ಬಗ್ಗೆ ಅಡ್ಹಾಕ್ ಸಮಿತಿಯ ಮುಂದೆ ಸರಿಪಡಿಸಿ ಆಕ್ಷೇಪಣೆಗಳನ್ನು ತೀರುವಳಿ ಮಾಡಲು ಮಾಹಿತಿಯನ್ನು ಸಲ್ಲಿಸಲಾಗಿದೆ.

14. ಸದರಿ ವರದಿಯ ಪುಟ ಸಂ.78 ರಿಂದ 80 ರವರೆಗೆ ನಮೂದಿಸಿರುವಂತೆ, 06.14 ರಲ್ಲಿ ನಮೂದಿಸಿರುವಂತೆ ಸಭೆ ನಡುವಳಿಗಳ ವಹಿಯಲ್ಲಿ ಗ್ರಾಮ ಪಂಚಾಯಿತಿ ಸದಸ್ಯರ ಹಾಜರಾತಿಯನ್ನು ನಿಯಮಾನುಸಾರ ಪಡೆದುಕೊಂಡಿರುತ್ತೇನೆ. ಠರಾವು ಮುಕ್ತಾಯಗೊಂಡ ನಂತರ ಹಾಜರಿದ್ದ ಸದಸ್ಯರ ಸಮ್ಮುಖದಲ್ಲಿ ಅಧ್ಯಕ್ಷರಿಂದ ಸಹಿ ಪಡೆದುಕೊಳ್ಳುವುದು ನಿಯಮವಿದ್ದು, ಅದರಂತೆ ಕ್ರಮ ವಹಿಸಿರುತ್ತೇನೆ.

15. 14ನೇ ಹಣಕಾಸು ಯೋಜನೆಯಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನಕ್ಕೆ ಠರಾವು ಮೂಲಕ ಅನುಮೋದನೆ ಪಡೆದು ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಕ್ರಿಯಾ ಯೋಜನೆಯನ್ನು ಅನುಮೋದನೆಯಾದ ನಂತರ ಸರ್ಕಾರದ ತುರ್ತು ಪರಿಸ್ಥಿತಿಯಲ್ಲಿ ನೀರು ಸರಬರಾಜಿಗೆ ಸಂಬಂಧಿಸಿದಂತೆ, ಮೇಲಾಧಿಕಾರಿಗಳ ಆದೇಶದಂತೆ, ಹೆಚ್ಚುವರಿಯಾಗಿ ಸರ್ಕಾರದಿಂದ ಬಿಡುಗಡೆಯಾದ ಮೊತ್ತವನ್ನು ಮೂಲಭೂತ ಸೌಕರ್ಯಗಳಿಗೆ ವೆಚ್ಚ ಭರಿಸುವುದರಲ್ಲಿ ಘಟನೋತ್ತರ ಮಂಜೂರಾತಿ ಪಡೆದು ಹೆಚ್ಚುವರಿಯಾಗಿ ರೂ.3,45,360/- ಗಳನ್ನು ನಿಯಮಾನುಸಾರ ವೆಚ್ಚ ಮಾಡಿರುತ್ತೇವೆ. ಆದುದರಿಂದ, ತನಿಖಾಧಿಕಾರಿಗಳ ಆಕ್ಷೇಪಣೆ ನಿಯಮಬಾಹಿರವಾಗಿರುತ್ತದೆಯೆಂದು ಕಂಡುಬಂದಿರುತ್ತದೆ.

16. ಕಂಡಿಕೆ 06.16 ರಲ್ಲಿಇ ಚೆಕ್ ಮೂಲಕ ಸರಬರಾಜುದಾರರಿಗೆ ಅನುದಾನ ಬಿಡುಗಡೆ ಮಾಡುವುದರಲ್ಲಿ ಸಾಗಾಣಿಕೆ ವೆಚ್ಚ ಮತ್ತು ಕೂಲಿ ಬಾಬತ್ತು ರೂ.309/- ಗಳನ್ನು ಚೆಕ್ ಮೊತ್ತದಲ್ಲಿ ಸೇರಿಸಿಕೊಂಡು ಪಾವತಿ ಮಾಡಿರುತ್ತೇನೆ. ಆ ಕಾರಣ ಯಾವುದೇ ಹಣ ದುರುಪಯೋಗವಾಗಿರುವುದಿಲ್ಲ.

17. ಕಂಡಿಕೆ 06.17 ರಲ್ಲಿ ಅಂಗಡಿ ಮಾಲೀಕರಿಂದ ಪಡೆದಿರುವ ಬಿಲ್‌ಗಳ ಮೊತ್ತಕ್ಕೂ, ಪಾವತಿಸಿರುವ ಮೊತ್ತಕ್ಕೂ ವ್ಯತ್ಯಾಸವಿದ್ದು, ಕಡಿಮ ಪಾವತಿಸಿರುತ್ತೇನೆಂದು ಹಾಗೂ ಬಿಲ್‌ಗಳನ್ನು ಪೂರ್ಣವಾಗಿ

ಪರಿಶೀಲಿಸದೆ, ಹಣ ಪಾವತಿ ಮಾಡಿರುತ್ತೇನೆಂದು ಆರೋಪಿಸಿರುವುದು ನ್ಯಾಯಸಮ್ಮತವಾಗಿರುವುದಿಲ್ಲ. ಆ ಕುರಿತು ದಾಖಲೆಗಳನ್ನು ವರದಿಯಲ್ಲಿ ನಮೂದಿಸಿರುವುದಿಲ್ಲ. ಅದೇರೀತಿ ಕಂಡಿಕೆ 06.18 ರಲ್ಲಿ ಖರೀದಿಯ ನಿಯಮಗಳನ್ನು ಮಾರ್ಗಸೂಚಿಗಳನ್ನು ಸುತ್ತೋಲೆಗಳಲ್ಲಿ ನೀಡಿರುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸದೆಹಣ ಪಾವತಿಸಿರುತ್ತೇನೆ ಎಂದು ಆರೋಪಿಸಿರುವುದು ನ್ಯಾಯಸಮ್ಮತವಾಗಿರುವುದಿಲ್ಲ. ಸದರಿ ಪಂಚಾಯಿತಿಯಲ್ಲಿ ತುರ್ತು ಸಾಮಗ್ರಿಗಳ ಖರೀದಿಯಲ್ಲಿ ಅಗತ್ಯ ಸೇವಾ ನಿಯಮಗಳ ಅಡಿಯಲ್ಲಿ ತುರ್ತಾಗಿ ನಿರ್ವಹಿಸುವ ಸಮಯದಲ್ಲಿ ಸದರಿ ಸಾಮಗ್ರಿಗಳಿಗೆ ನಿಯಮಗಳಲ್ಲಿ ವಿನಾಯಿತಿ ಇರುವ ಬಗ್ಗೆ ತನಿಖಾಧಿಕಾರಿಗಳು ನಿಯಮಾನುಸಾರ ಪರಿಶೀಲಿಸದೆ ಏಕ ಪಕ್ಷೀಯವಾಗಿ ಆರೋಪಿಸಿರುವುದು ನ್ಯಾಯಸಮ್ಮತವಾಗಿರುವುದಿಲ್ಲ.

18. ಕಂಡಿಕೆ ನಂ.06.18 ಡಿಸೆಂಬರ್ 2016 ರಲ್ಲಿ ಕಟಾವುಗೊಳಿಸಿದ ಆದಾಯ ತೆರಿಗೆ, ರಾಜ ಧನ, ಮಾರಾಟ ತೆರಿಗೆ, ಕಾರ್ಮಿಕ ಕಲ್ಯಾಣ ನಿಧಿ ಖಾತೆಗಳಿಗೆ ರೂ.11,730/– ಗಳನ್ನು ಇಲಾಖೆಗಳಿಗೆ ಜಮೆ ಮಾಡಿರುವ ಬಗ್ಗೆ ಸ್ವೀಕೃತಿ ಪತ್ರಗಳನ್ನು ದಾಖಲಾತಿಗಳೊಂದಿಗೆ ಸಲ್ಲಿಸಿಲ್ಲವೆಂದು ಆರೋಪಿಸಿರುವುದು ಸರಿಯಿರುವುದಿಲ್ಲ. ಸದರಿ ಮೊತ್ತವನ್ನು ಬ್ಯಾಂಕ್ ಖಾತೆಯಲ್ಲಿ ಉಳಿತಾಯವಾಗಿರುತ್ತದೆ. ಆ ಕುರಿತು ತನಿಖಾಧಿಕಾರಿಯವರು ಬ್ಯಾಂಕ್ ಖಾತೆ ದಾಖಲೆಗಳನ್ನು ಪರಿಶೀಲಿಸಿರುವುದಿಲ್ಲ. ಕಾರಣ ಆಪಾದಿಸಿರುವುದು ನ್ಯಾಯಸಮ್ಮತವಾಗಿರುವುದಿಲ್ಲ.

19. ಕಂಡಿಕೆ 06.20 ರಲ್ಲಿ ನಮೂದಿಸಿರುವಂತೆ ವಿವಿಧ ಚೆಕ್‌ಗಳಲ್ಲಿ ಸರಬರಾಜುದಾರರಿಗೆ ಮತ್ತು ಗುತ್ತಿಗೆದಾರರಿಗೆ ಪಾವತಿ ಮಾಡಿರುವ ಒಟ್ಟು ಮೊತ್ತದಲ್ಲಿ ರೂ.8,000/– ಗಳನ್ನು ಕಟಾಯಿಸಿದ್ದು, ಹೊಂದಾಣಿಕೆ ಮೊತ್ತವನ್ನು ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಪಾವತಿಸಿರುವುದಿಲ್ಲವೆಂದು ಆರೋಪಿಸಿರುತ್ತಾರೆ. ಆದರೆ ಸದರಿ ಮೊತ್ತವು ಬ್ಯಾಂಕ್ ಖಾತೆಯಲ್ಲಿ ಉಳಿತಾಯವಾಗಿರುತ್ತದೆ. ಆ ಕುರಿತು ದಾಖಲಾತಿಗಳನ್ನು ಪರಿಶೀಲಿಸಿರುವುದಿಲ್ಲ.

20. ತನಿಖಾ ವರದಿಯ ಪುಟ ಸಂ.74 ರಿಂದ 80 ರವರೆಗೆ ನಮೂದಿಸಿರುವ ತನಿಖಾಭಿಪ್ರಾಯದಲ್ಲಿ ಕಂಡಿಕೆ 06.01 ರಂತೆ ಪ್ರತ್ಯುತ್ತರವನ್ನು ಸದರಿಯವರ ಕರ್ತವ್ಯದ ಅವಧಿಗೆ ಸಂಬಂಧಿಸಿದಂತೆ ವೋಚರ್‌ಗಳನ್ನು ಸಲ್ಲಿಸಿರುತ್ತೇನೆ. ಆದರೆ ರೂ.10,66,435/– ಗಳಲ್ಲಿ ನಮೂದಿಸಿರುವಂತೆ ವೋಚರ್ ಲಭ್ಯವಿಲ್ಲವೆಂದು ನಮೂದಿಸಿರುತ್ತಾರೆ. ಆದರೆ, ಸದರಿಯವರ ಕರ್ತವ್ಯದ ಅವಧಿಗೆ ಸಂಬಂಧಿಸಿದಂತೆ, ವೆಚ್ಚದ ಬಗ್ಗೆ ನಗದು ಪುಸ್ತಕದಲ್ಲಿ ನಮೂದಿಸಿರುವ ದಾಖಲೆಗಳನ್ನು ಸಲ್ಲಿಸಿರುತ್ತೇನೆ. ಸದರಿಯರ ಅವಧಿಗೆ ಸಂಬಂಧಿಸಿದಂತೆ ಎಲ್ಲಾ ದಾಖಲೆಗಳನ್ನು ಸಲ್ಲಿಸಿರುತ್ತೇನೆ. ದಿ.16/12/2016 ರಿಂದ ದಿ.31/3/2017 ರವರೆಗೆ ಸದರಿ ಪಂಚಾಯಿತಿಯ ಕರ್ತವ್ಯದಲ್ಲಿದ್ದ 2ನೇ ಆಪಾದಿತ ನೌಕರರಿಂದ ಪಡೆಯಬೇಕೆಂದು ಪ್ರತ್ಯುತ್ತರದಲ್ಲಿ ಮತ್ತು ತನಿಖಾಧಿಕಾರಿಗೆ ಸಲ್ಲಿಸಿರುತ್ತೇನೆ.

21. ಕಂಡಿಕೆ 06.02 ರಲ್ಲಿ ಸದರಿಯವರ ಕರ್ತವ್ಯದ ಅವಧಿಗೆ ಸಂಬಂಧಿಸಿದಂತೆ ಎಲ್ಲಾ ದಾಖಲೆಗಳನ್ನು ತನಿಖಾಧಿಕಾರಿಯವರಿಗೆ ಸಲ್ಲಿಸಿದ್ದು, 2ನೇ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿದ ಪಿ.ಡಿ.ಓ. ರವರಿಂದ ದಾಖಲೆ ಮತ್ತು ಮಾಹಿತಿಯನ್ನು ಪಡೆದುಕೊಳ್ಳಲು ತನಿಖಾಧಿಕಾರಿಗಳಿಗೆ ಮನವಿ ಮಾಡಿರುತ್ತೇನೆ. ಕಂಡಿಕೆ 06.03 ರಲ್ಲಿ ದಿ.12/1/2018 ರಲ್ಲಿ ಸಲ್ಲಿಸಿರುವ ಪ್ರತ್ಯುತ್ತರದಲ್ಲಿ ಪ್ರತಿಯೊಂದು ಕಾಮಗಾರಿಗೂ ಯಾವುದೇ

ಕರ್ತವ್ಯಲೋಪ ಅಥವಾ ಹಣ ದುರುಪಯೋಗವಾಗಿರುವುದಿಲ್ಲವೆಂದು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 50 ರಿಂದ 57 ರವರೆಗೆ ನಮೂದಿಸಿರುವಂತೆ ಕ್ರಮ ವಹಿಸಿರುತ್ತೇನೆ. ದೂರುದಾರರು ಮಾಡಿರುವ ಆಪಾದನೆ ನ್ಯಾಯಸಮ್ಮತವಾಗಿರುವುದಿಲ್ಲ. ಪ್ರಕರಣದಿಂದ ಕೈಬಿಡಬೇಕೆಂದು ಕೋರಿರುತ್ತಾರೆ.

22. ಸದರಿ ಎದುರುದಾರರು ದಿ.12/1/2018 ರಂದು ಸಲ್ಲಿಸಿರುವ 1ನೇ ಎದುರುದಾರರು ಈ ಮೇಲೆ ಹೇಳಿದ ಸೇವಾ ಅವಧಿಯಲ್ಲಿ ಖರೀದಿ ಸಾಮಗ್ರಿಗಳಿಗೆ ಸಂಬಂಧಿಸಿದಂತೆ ಕೆ.ಟಿ.ಪಿ.ಪಿ. ನಿಯಮ 1999, 2000 ರ ಪ್ರಕರಣ 4eee ರಂತೆ ನೀರು ಸರಬರಾಜು ಕಾಮಗಾರಿಗಳ ವೆಚ್ಚಕ್ಕೆ ರೂ.2 ಲಕ್ಷದವರೆಗೆ ವಿನಾಯಿತಿ ಇರುವ ಬಗ್ಗೆ ತನಿಖಾಧಿಕಾರಿಯವರು ಪರಿಶೀಲಿಸಿರುವುದಿಲ್ಲ. ಮತ್ತು 14ನೇ ಹಣಕಾಸು ಯೋಜನೆಯ ಮಾರ್ಗಸೂಚಿಗಳನ್ನು ತನಿಖಾ ಅವಧಿಯಲ್ಲಿ ಪರಿಗಣಿಸದೆ, ಏಕಪಕ್ಷೀಯವಾಗಿ ಕ್ರಮ ಕೈಗೊಂಡಿರುತ್ತೇನೆಂದು ಆಪಾದಿಸಿರುವುದು ನ್ಯಾಯಸಮ್ಮತವಾಗಿರುವುದಿಲ್ಲ. ಕಂಡಿಕೆ 06.06 ತನಿಖಾ ವರದಿಯಲ್ಲಿ ನಮೂದಿಸಿರುವಂತೆ ಕೆ.ಟಿ.ಪಿ.ಪಿ. ನಿಯಮಗಳಲ್ಲಿ ವಿನಾಯಿತಿ ಇರುವ ಬಗ್ಗೆ ಬಜೆಟ್ ಅಧಿನಿಯಮದಲ್ಲಿ ಅಧ್ಯಕ್ಷರು ಅವರ ವಿವೇಚನೆಯಂತೆ ಸಾಮಗ್ರಿಗಳ ಖರೀದಿಯಲ್ಲಿ ಸದರಿ ಪಂಚಾಯಿತಿಯ ಪರವಾಗಿ ಖರೀದಿಸುವ ಹಾಗೂ ಕರಾರುಪತ್ರಗಳಿಗೆ ಅಧ್ಯಕ್ಷರು ಸಹಿ ಮಾಡುವ ಅಧಿಕಾರ ಇರುತ್ತದೆ ಎಂದು ಸ್ಪಷ್ಟ ದಾಖಲಾತಿಗಳೊಂದಿಗೆ ತನಿಖಾಧಿಕಾರಿಯವರಿಗೆ ಪ್ರತ್ಯುತ್ತರ ಸಲ್ಲಿಸಿರುತ್ತೇನೆ. ಕಂಡಿಕೆ 06.07 ರಲ್ಲಿ ನಮೂದಿಸಿರುವ ಆರೋಪಗಳಿಗೆ ಸಂಬಂಧಿಸಿದಂತೆ, ವೋಚರ್‌ಗಳ ಹಿಂಬದಿಯಲ್ಲಿ ದೃಢೀಕರಣ ಮಾಡಿ ದಾಸ್ತಾನು ವಹಿಗೆ ತೆಗೆದುಕೊಂಡಿರುವ ತನಿಖಾ ಅವಧಿಯಲ್ಲಿ ಸಲ್ಲಿಸಿರುತ್ತೇನೆ. ಮೊದಲ ಹಂತದಲ್ಲಿ ಬಿಲ್‌ಗಳಲ್ಲಿ ಜೆರಾಕ್ಸ್ ಪ್ರತಿಗಳ ಮುಖಪುಟದ ಬಿಲ್‌ಗಳನ್ನು ಮಾತ್ರ ಸಲ್ಲಿಸಿದ್ದು, ದಾಸ್ತಾನಿಗೆ ತೆಗೆದುಕೊಂಡ ಬಿಲ್‌ಗಳ 2ನೇ ಪುಟದ ಹಾಳೆಗಳನ್ನು ದಾಸ್ತಾನು ವಿವರಗಳನ್ನು ನಮೂದಿಸಿರುವ ಬಗ್ಗೆ ಸಲ್ಲಿಸಿರುತ್ತೇನೆ. ಆ ಕಾರಣ ಸದರಿ ಕಂಡಿಕೆಯಲ್ಲಿ ಮಾಡಿರುವ ಆರೋಪ ನ್ಯಾಯಸಮ್ಮತವಾಗಿರುವುದಿಲ್ಲ.

23. ಕಂಡಿಕೆ 06.08 ರಲ್ಲಿ ನಮೂದಿಸಿರುವ ಆರೋಪಗಳಿಗೆ ಸಂಬಂಧಿಸಿದಂತೆ, ದಿ.26/5/2018 ರ ಪ್ರತ್ಯುತ್ತರದ ಕ್ರ.ಸಂ.9 ರಲ್ಲಿ ನಿಯಮಾನುಸಾರ ವ್ಯಾಟ್ ಮತ್ತು ಸೇವಾ ತೆರಿಗೆಗಳನ್ನು ಬಿಲ್‌ನಲ್ಲಿ ಪಡೆದು ನಿಯಮಾನುಸಾರ ವೆಚ್ಚ ಮಾಡಿರುತ್ತೇನೆ. ಕಂಡಿಕೆ 06.09 ರಲ್ಲಿ ನಮೂದಿಸಿರುವ ಆರೋಪದಂತೆ ಗುತ್ತಿಗೆದಾರರಿಗೆ ಹಣ ಪಾವತಿ ಮಾಡಿರುವ ಬಗ್ಗೆ ಮಾಹಿತಿಯನ್ನು ಬಿಲ್‌ಗಳಲ್ಲಿ ನಮೂದಿಸಿದ್ದು, ಯಾವುದೇ ಕರ್ತವ್ಯಲೋಪ ಎಸಗಿರುವುದಿಲ್ಲ. ಕಂಡಿಕೆ 06.10 ರಲ್ಲಿ ನಮೂದಿಸಿರುವ ತನಿಖಾ ವರದಿಯಲ್ಲಿ ವಾಣಿಜ್ಯ ತೆರಿಗೆ ಮೊತ್ತವನ್ನು ಬಿಲ್ಲಿನ ಮೊತ್ತದೊಂದಿಗೆ ಅಡಕವಾಗಿದ್ದು, ಸರಬರಾಜುದಾರರು ಬಿಲ್‌ಗಳ ಮಾರಾಟ ತೆರಿಗೆಯನ್ನು ವ್ಯಾಟ್ ತೆರಿಗೆ ಮತ್ತು ರಾಜಿ ತೆರಿಗೆಯಂತೆ ಬಿಲ್‌ಗಳಲ್ಲಿ ಕಟಾವುಗೊಳಿಸಿ ನೇರವಾಗಿ ಮಾರಾಟ ತೆರಿಗೆಯನ್ನು ಇಲಾಖೆಗೆ ಒಟ್ಟಾರೆ ವಹಿವಾಟಿಗೆ ಸಂಬಂಧಿಸಿದಂತೆ ಸಂದಾಯ ಮಾಡಿರುತ್ತಾರೆ ಎನ್ನುವ ಆರೋಪ ನ್ಯಾಯಸಮ್ಮತವಾಗಿರುವುದಿಲ್ಲ.

24. ಕಂಡಿಕೆ 06.11 ಮತ್ತು 06.12 ರಲ್ಲಿ ಮಾಡಿರುವ ಆರೋಪಗಳು ನ್ಯಾಯಸಮ್ಮತವಾಗಿರುವುದಿಲ್ಲ. 06.13 ರಲ್ಲಿ ನಮೂದಿಸಿರುವ ಆರೋಪ ಸರಬರಾಜುದಾರರಿಗೆ ಅಕೌಂಟ್ ಪೇಯಿ ಚೆಕ್ ಮೂಲಕ ವಿತರಿಸಲಾಗಿದ್ದು, ವಿತರಣಾ ವಹಿಯಲ್ಲಿ ನಿಯಮಾನುಸಾರ ಸರಬರಾಜುದಾರರಿಂದ ಸಹಿ

ಪಡೆದುಕೊಂಡಿರುತ್ತೇನೆ. ಸದರಿ ತಸಿಖಾಧಿಕಾರಿಯವರು 1ನೇ ಎದುರುದಾರರ ಮೇಲೆ ಮಾಡಿರುವ ಆರೋಪ ನ್ಯಾಯಸಮ್ಮತವಾಗಿರುವುದಿಲ್ಲ. ಪ್ರಸ್ತುತ ದೂರನ್ನು ವಜಾಗೊಳಿಸಿ ಆರೋಪದಿಂದ ಮುಕ್ತಗೊಳಿಸುವಂತೆ ಕೋರಿರುತ್ತಾರೆ.

25. 2ನೇ ಎದುರುದಾರರಿಗೆ ತನಿಖಾ ವರದಿಯ ಮೇಲೆ ಆಕ್ಷೇಪಣೆ ಸಲ್ಲಿಸುವಂತೆ ದಿ.16/1/2020 ರಿಂದ ದಿ.29/9/2021 ವರೆಗೆ ನೋಟೀಸು ಹಾಗೂ ನೆನಪೋಲೆಗಳನ್ನು ಕಳುಹಿಸಿದ್ದು, ಸಾಕಷ್ಟು ಕಾಲಾವಕಾಶ ನೀಡಿದರೂ ಸಹ ಸದರಿಯವರು ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

26. ತನಿಖಾಧಿಕಾರಿಯವರು ಸಲ್ಲಿಸಿದ ವರದಿಯ ಪ್ರಕಾರ 1ನೇ ಎದುರುದಾರರಾದ ಶ್ರೀ.ಶ್ರೀನಿವಾಸಮೂರ್ತಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಇವರು ದಿ.1/4/2016 ರಿಂದ 15/12/2016 ರವರೆಗೆ ಕಾರ್ಯನಿರ್ವಹಿಸಿದ ಅವಧಿಯಲ್ಲಿ 14ನೇ ಹಣಕಾಸು ಯೋಜನೆ ಖಾತೆಯಲ್ಲಿ ನಿರ್ವಹಿಸಿರುವ ದಾಖಲಾತಿಗಳನ್ವಯ ಆರೋಪಗಳು ಸಾಬೀತಾಗಿದ್ದು, ನಿಯಮ, ಸುತ್ತೋಲೆ, ಮತ್ತು ಮಾರ್ಗಸೂಚಿಗಳನ್ನು ಗಮನಿಸಿ ಕಾಲಕಾಲಕ್ಕೆ ಕ್ರಮ ವಹಿಸದೆ ಕರ್ತವ್ಯಲೋಪ ಮಾಡಿರುವುದು, ಹೆಚ್ಚುವರಿ ಮೊತ್ತ ರೂ.309/- ಗಳನ್ನು ಪಾವತಿಸಿ ಕರ್ತವ್ಯಲೋಪ ಎಸಗಿರುವುದು ಕಂಡುಬಂದಿರುತ್ತದೆ. ಆದುದರಿಂದ, 1ನೇ ಎದುರುದಾರರು ತನಿಖಾ ವರದಿಯ ಮೇಲೆ ಸಲ್ಲಿಸಿರುವ ಆಕ್ಷೇಪಣೆಯು ಒಪ್ಪತಕ್ಕದ್ದಲ್ಲವೆಂದು ಅಭಿಪ್ರಾಯಪಡಲಾಗಿದೆ.

27. ಅದೇರೀತಿ 2ನೇ ಎದುರುದಾರರಾದ ಶ್ರೀ.ಬಿ.ಆರ್.ಫಣೀಂದ್ರ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ದಿ.16/12/2016 ರಿಂದ 31/3/2017 ರ ವರೆಗೆ ಕರ್ತವ್ಯ ನಿರ್ವಹಿಸಿದ್ದು, ಸದರಿ ಅವಧಿಯಲ್ಲಿ ಖರ್ಚು ಮಾಡಿರುವ ಒಟ್ಟು ಮೊತ್ತ ರೂ.4,85,609/- ಗಳಿಗೆ ಯಾವುದೇ ದಾಖಲಾತಿಗಳನ್ನು ತನಿಖೆಯ ಕಾಲಕ್ಕೆ ಹಾಜರುಪಡಿಸದೆ ಹಾಗೂ ರೂ.45,581/- ಗಳನ್ನು 2016-17ನೇ ಸಾಲಿನಲ್ಲಿ ಪಾವತಿಸಿರುವ ಲೆಕ್ಕಕ್ಕೆ ಸೇರಿಸಿ, ಲೆಕ್ಕ ಪತ್ರ ನಿರ್ವಹಣೆಯಲ್ಲಿ ಮಾಡಿರುವ ಹಣ ದುರುಪಯೋಗ ಆಗಿರುವುದು, ಪಾವತಿಗೆ ಸಂಬಂಧಿಸಿದಂತೆ ಪೂರಕ ದಾಖಲೆಗಳನ್ನು ಸಲ್ಲಿಸದೆ ಕರ್ತವ್ಯಲೋಪ ಎಸಗಿರುತ್ತಾರೆಂದು ಕಂಡುಬರುತ್ತದೆ. ಅದೇರೀತಿ ತನಿಖಾಧಿಕಾರಿಯವರು ದಿ.24/1/2018 ರಿಂದ ತನಿಖೆ ಕೈಗೊಳ್ಳುವ ಕಾಲಕ್ಕೆ ಸದರಿ 2ನೇ ಎದುರುದಾರರು ಸದರಿ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು.

28. ಆದ್ದರಿಂದ, 1ನೇ ಎದುರುದಾರರಾದ ಶ್ರೀ.ಶ್ರೀನಿವಾಸಮೂರ್ತಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಇವರು ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತ ರೂ.309/- ಗಳನ್ನು ಮತ್ತು 2ನೇ ಎದುರುದಾರರಾದ ಶ್ರೀ.ಬಿ.ಆರ್.ಫಣೀಂದ್ರ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ವರ್ಲಕೊಂಡ ಗ್ರಾಮ ಪಂಚಾಯಿತಿ, ಗುಡಿಬಂಡೆ ತಾಲ್ಲೂಕು, ಚಿಕ್ಕಬಳ್ಳಾಪುರ ಇವರು ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ದಾಖಲೆಗಳನ್ನು ನಿರ್ವಹಿಸದೆ ಖರ್ಚು ಮಾಡಿರುವ ಮೊತ್ತ ರೂ. 4,85,609/- ಹಾಗೂ ಲೆಕ್ಕಪತ್ರ ನಿರ್ವಹಣೆಯಲ್ಲಿ ದುರುಪಯೋಗವಾಗಿರುವ ಹಣ ರೂ.45,581/- ಗಳನ್ನು 2ನೇ ಎದುರುದಾರರಿಂದ ವಸೂಲಿ ಮಾಡಲು ಶಿಫಾರಸ್ಸು ಮಾಡಿ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1) ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಬಹುದಾಗಿದೆಯೆಂದು ಅಭಿಪ್ರಾಯಿಸಿದೆ.

29. ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮೇಲೆ ನಮೂದಿಸಿದ ಹಣ ದುರುಪಯೋಗಕ್ಕೆ ಸಂಬಂಧಪಟ್ಟಂತೆ ವಸೂಲಿ ಮಾಡಲು ಕ್ರಮ ಕೈಗೊಳ್ಳಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

27/7/22

(ಕೆ.ಎನ್.ಫಣೀಂದ್ರ)

**ಉಪಲೋಕಾಯುಕ್ತರು-2,**

**ಕರ್ನಾಟಕ ರಾಜ್ಯ, ಬೆಂಗಳೂರು.**